**ದಿನಾಂಕಃ 06-07-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು ಆರೋಪಿ ಪರ ವಕೀಲರಿಂದಃ-**

1ನೇ ಆರೋಪಿಯ ತಂದೆ ಅಂದರೆ ನನ್ನ ಮಾವ ಈ ಮೇಲೆ ಹೇಳಿದ 1 ಎಕರೆ ಮೂರು ಮುಕ್ಕಾಲು ಗುಂಟೆ ಜಮೀನನ್ನು 2ನೇ ಆರೋಪಿಯ ಗಂಡನಾದ ವೈರಮುಡಿ ಇವರಿಗೆ ದಿನಾಂಕಃ 11-10-2005 ರಂದು ಕನಕಪುರ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 44,000/-ರೂಪಾಯಿಗಳನ್ನು ಪಡೆದು ನೋಂದಣಿಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

2. ಸದರಿ ಕ್ರಯಪತ್ರವಾದ ನಂತರ ನಾನು 1ನೇ ಆರೋಪಿ ಮತ್ತು ಅವರ ತಂದೆ ತಾಯಿಯರೊಂದಿಗೆ ಜಗಳ ಮಾಡಲು ಪ್ರಾರಂಭಿಸಿದೆ ಎಂದರೆ ಸರಿಯಲ್ಲ. 2ನೇ ಆರೋಪಿಯು ಬಂದಾಗ ಅವರ ಹತ್ತಿರ ಸಹ ಜಗಳ ಮಾಡಿದೆ ಎಂದರೆ ಸರಿಯಲ್ಲ.

3. ಸದರಿ ಕ್ರಯ ಪತ್ರವಾದ ನಂತರ 2ನೇ ಆರೋಪಿಯನ್ನು ದ್ವೇಷದ ಕಾರಣ ಈ ಪ್ರಕರಣದಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಬೆಂಗಳೂರಿನ ದೇವರಚಿಕ್ಕನಹಳ್ಳಿ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿದ್ದಾಗ ಆರೋಪಿ ಮತ್ತು ನಾನು ಅನ್ಯೋನ್ಯವಾಗಿದ್ದೆವು ಎಂದರೆ ಸಾಕ್ಷಿಯು ಅನ್ಯೋನ್ಯವಾಗಿ ಇರಲಿಲ್ಲ, ಆರೋಪಿ ಬಾಡಿಗೆ ಕಟ್ಟುತ್ತಿರಲಿಲ್ಲ, ಮನೆಗೆ ಏನು

ತಂದು ಹಾಕುತ್ತಿರಲಿಲ್ಲ, ನಮಗೆ ಮತ್ತು ಮಕ್ಕಳಿಗೆ ಹೊಡೆಯುುವುದು ಬಡಿಯುುವುದು ಮಾಡುತ್ತಿದ್ದ. ಆಗ ಆಸ್ಪತ್ರೆಗೆ ನಾನು ಚಿಕಿತ್ಸೆ ಪಡೆಯಲು ಹೋಗಿಲ್ಲ.

4. ಆರೋಪಿಗೆ ವ್ಯವಸಾಯ ಬಿಟ್ಟು ಬೇರೆ ಕೆಲಸ ಮಾಡಲು ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿದಿಯೊ ಇಲ್ಲವೊ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಜೀವನ ನಿರ್ವಹಣೆ ಮಾಡಲು ಕಷ್ಟವಾಗುತ್ತದೆ ಆದ್ದರಿಂದ ಊರಿಗೆ ಹೊಗೋಣ ಎಂದು ಹೇಳಿದ್ದರೂ ಸಹ ಅದಕ್ಕೆ ನಾನು ಒಪ್ಪಲಿಲ್ಲ ಎಂದರೆ ಸರಿಯಲ್ಲ.

5. ನನ್ನ ಮಾವ ವಯೋಸಹಜ ಮರಣಹೊಂದಿರುತ್ತಾರೆ ಎಂದರೆ ಸರಿ. 1ನೇ ಆರೋಪಿಯ ತಂದೆ ಮರಣ ಹೊಂದಿದ ನಂತರ 1ನೇ ಆರೋಪಿಯ ತಾಯಿ ಏಕಾಂಗಿಯಾಗಿರುತ್ತಾರೆ ಎಂದು 1ನೇ ಆರೋಪಿಯು ಬೆಂಗಳೂರು ಬಿಟ್ಟು ಊರಿಗೆ ಹೊಗೋಣ ಎಂದು, ಅಲ್ಲಿಯೇ ಜೀವಿಸೋಣ ಎಂದು ಕರೆದರೂ ಸಹ ನಾನು ಒಪ್ಪಲಿಲ್ಲ ಎಂದರೆ ಸರಿಯಲ್ಲ. ಜಮೀನು ಮಾರಾಟ ವಿಚಾರವಾಗಿ ನಮಗೆ ಮನಸ್ತಾಪ ಇದ್ದುರಿಂದ ಹಾಗೂ 1ನೇ ಆರೋಪಿ ಬೆಂಗಳೂರು ಬಿಟ್ಟು ಊರಿಗೆ ಹೋಗೋಣ ಎಂದು ಕರೆದಿದ್ದರಿಂದ ನಾನು ಆರೋಪಿ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಬಸವರಾಜ್ ಅಲಿಯಾಸ್ ಕುಮಾರ್ ಇವರ ಮಾತನ್ನು ಕೇಳಿ ದೂರು

ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಮಕ್ಕಳ ಖರ್ಚು ಮತ್ತು ವಿಧ್ಯಾಭ್ಯಾಸದ ಖರ್ಚನ್ನು ನೋಡಿಕೊಳ್ಳುವುದಾಗಿ ಜೊತೆಯಲ್ಲಿ ಬರುವಂತೆ ಕರೆದರೂ ಸಹ ನಾನು ಅದಕ್ಕೆ ತಯಾರಿಲ್ಲ ಎಂದರೆ ಸಾಕ್ಷಿಯು ಅವರು ಕರೆದಿಲ್ಲ ಎಂದು ಹೇಳುತ್ತಾರೆ.

6. ಆರೋಪಿ ನಿಮಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದ ದಿನಾಂಕ ಮತ್ತು ಸಮಯಗಳನ್ನು ಹೇಳಲು ಆಗುತ್ತದೆಯೆ ಎಂದರೆ ಸಾಕ್ಷಿಯು ನಾನು ಮರೆತಿದ್ದೇನೆ ಎಂದು ಹೇಳುತ್ತಾರೆ. ಆರೋಪಿಯು ನಿಮ್ಮ ಮಾಂಗಲ್ಯಸೂತ್ರವನ್ನು ಕಿತ್ತುಕೊಂಡ ದಿನಾಂಕ ಹೇಳಲು ಆಗುತ್ತದೆಯೆ ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ ಆದರೆ ಅದು 6.00 ಬೆಳಗ್ಗಿನ ಜಾವ ಆಗಿತ್ತು ಎಂದು ಹೇಳುತ್ತಾರೆ. ನಾನು ಹೇಳಿದಂತೆ ಈ ರೀತಿಯ ಘಟನೆ ಆಗಿಯೆ ಇಲ್ಲ , ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಊರಿಗೆ ಬರುವಂತೆ ಕರೆದಿದ್ದರಿಂದ ನನಗೆ ಬೆಂಗಳೂರು ಬಿಟ್ಟು ಹೋಗಲು ಇಷ್ಟವಿಲ್ಲದೆ ಆತನ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಹಾಗೂ 2ನೇ ಆರೋಪಿಯ ಗಂಡ ನನ್ನ ಮಾವನಿಂದ ಜಮೀನು ಖರೀದಿಸಿದ್ದರಿಂದ ಆಕೆಯು ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

7. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದೇ ಬಾರಿ ಮೈಕೊ ಲೇಔಟ್ ಪೊಲೀಸ್ ಠಾಣೆಗೆ ಹೋಗಿದ್ದೆ. ಸದರಿ ಪೊಲೀಸ್ ಠಾಣೆಯಲ್ಲಿ ನಾನು ಒಂದು ಸಹಿ ಮಾತ್ರ

ಮಾಡಿದ್ದೇನೆ. ಸಾಕ್ಷಿ ಮುಂದುವರೆದು ಎಷ್ಟು ಸಹಿ ಮಾಡಿಸಿಕೊಂಡಿದ್ದಾರೊ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-2 ಪಂಚನಾಮೆಯಲ್ಲಿರುವ ಸಹಿ ತೋರಿಸಿ ಈ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೀರಿ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿದ್ದಾರೆ. ಸದರಿ ಪತ್ರದಲ್ಲಿ ಏನು ಬರೆದಿದ್ದಾರೆ ಎಂಬುದು ನಿಮಗೆ ಗೊತ್ತಿಲ್ಲ ಎನ್ನುವ ಸಲಹೆಗೆ ಸಾಕ್ಷಿಯು ಹೌದು ಎಂದು ಒಪ್ಪಿದ್ದಾರೆ.

8. ನಾನು ಮತ್ತು 1ನೇ ಆರೋಪಿ ಅನ್ಯೋನ್ಯವಾಗಿ ಸಂಸಾರ ಮಾಡಿಕೊಂಡಿದ್ದರೂ ಸಹ ಬೇರೆಯವರ ಮಾತುಕೇಳಿ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ 1 ಎಕರೆ ಮೂರು ಮುಕ್ಕಾಲು ಗುಂಟೆ ಜಮೀನು ಕೋಟಿ ಬೆಲೆ ಬಾಳುತ್ತದೆ ಎಂದರೆ ಸರಿ. ಸದರಿ ಜಮೀನು ಪಡೆದುಕೊಳ್ಳುವ ಉದ್ದೇಶದಿಂದ 2ನೇ ಆರೋಪಿಯನ್ನು ಉದ್ದೇಶ ಪೂರ್ವಕವಾಗಿ ಈ ಕೇಸಿನಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

9. ಚಾಸಾ-4 ನನ್ನ ತಾಯಿ, ಚಾಸಾ-5 ಮತ್ತು 6 ಸಂಬಂಧಿಕರು, ಚಾಸಾ-2, 3, 7, 8 ಮತ್ತು 9 ರವರು ನಮಗೆ ಪರಿಚಯದವರಾಗಿರುತ್ತಾರೆ ಆದರೆ ಸಂಬಂಧಿಕರಲ್ಲ, ಚಾಸಾ-10 ನನ್ನ ಅಣ್ಣ ಆಗಿರುತ್ತಾರೆ.

10. 1 ಮತ್ತು 2ನೇ ಆರೋಪಿತರು ನನಗೆ ಯಾವುದೇ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯು ನನ್ನ ತಾಳಿಯನ್ನು ಕಿತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ನೀಡಿದ ದೂರಿನಂತೆ ಹಾಗೂ ಮುಖ್ಯವಿಚಾರಣೆಯಲ್ಲಿ ನುಡಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿದಂತೆ ಕೇಳಲಿ ಎಂಬ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)
ಮು. ಮ. ದಂ. ನ್ಯಾ ಬೆಂ. ನಗರ.